KACB010004462023

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸ್ಪೆಷಲ್ ಕೇಸ್ ನಂ. 33/2023

ಫಿರ್ಯಾದಿಃ ಸರ್ಕಾರ - ಪೆರೇಸಂದ್ರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೆಂಕಟೇಶ ಮತ್ತು ಇನ್ನೊಬ್ಬರು

## ದೋಷಾರೋಪಣೆ

ಶ್ರೀಮತಿ ಎನ್.ವಿ.ಭವಾನಿ, ಬಿ.ಎ. ಎಲ್.ಎಲ್.ಬಿ. ಹಾನರ್ಸ್ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು

1. ವೆಂಕಟೇಶ್, ತಂದೆಃ ವೆಂಕಟರಾಯಪ್ಪ, ವಯಸ್ಸುಃ 49 ವರ್ಷ, ಉದ್ಯೋಗಃ ವ್ಯವಸಾಯ, ವಾಸಃ ಶೆಟ್ಟಿಗೆರೆ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ.
2. ಶ್ರೀನಿವಾಸ ತಂದೆಃ ಲೇಟ್ ಮುನಿಸ್ವಾಮಿ, ವಯಸ್ಸುಃ 40 ವರ್ಷ ಉದ್ಯೋಗಃ ವ್ಯವಸಾಯ, ವಾಸಃ ಶೆಟ್ಟಿಗೆರೆ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ.

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕ 29.10.2022 ರಂದು ಮಧ್ಯಾಹ್ನ 3.30 ಗಂಟೆಯಲ್ಲಿ ಚಾಸಾ-1 ಶ್ರೀ ಮಂಜುನಾಥ.ಡಿ, ಆರಕ್ಷಕ ಉಪ ನಿರೀಕ್ಷಕರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಮಾನ್ಯ ಪೊಲೀಸ್ ಉಪಾಧೀಕ್ಷಕರು, ಚಿಕ್ಕಬಳ್ಳಾಪುರ ಉಪ ವಿಭಾಗರವರ ಲಿಖಿತ ಅನುಮತಿಯನ್ನು ಪಡೆದುಕೊಂಡು ಪಂಚರಾದ ಚಾಸಾ-2 ಮತ್ತು 3 ಹಾಗೂ ತಮ್ಮ ಸಿಬ್ಬಂದಿಗಳಾದ ಚಾಸಾ-4 ರಿಂದ 8 ರವರೊಂದಿಗೆ ಚಿಕ್ಕಬಳ್ಳಾಪುರ ತಾಲ್ಲೂಕು, ಶೆಟ್ಟಿಗೆರೆ ಗ್ರಾಮದ ವಾಸಿ 1 ನೇ ಆರೋಪಿಯಾದ

ನಿಮ್ಮ ಜಮೀನಿನ ಸರ್ವೆ ನಂಬರ್ 64 ಕ್ಕೆ ದಾಳಿ ಮಾಡಿದಾಗ, ನಿಮ್ಮ ಜಮೀನಿನಲ್ಲಿ 2 ನೇ ಆರೋಪಿಯವರು ರೋಜಾ ಹೂವು ಗಿಡಗಳು ಮಧ್ಯದಲ್ಲಿ ಅಕ್ರಮವಾಗಿ ಮಾದಕ ವಸ್ತುವಾದ ಸುಮಾರು 8 ಕೆಜಿ 550 ಗ್ರಾಮ್ ತೂಕದ ಗಾಂಜಾ ಗಿಡಗಳನ್ನು ಯಾವುದೇ ಪರವಾನಿಗೆಯನ್ನು ಪಡೆಯದೇ ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಬೆಳೆಸಿದ್ದು, ಸದರಿ ಗಾಂಜಾ ಗಿಡಗಳೊಂದಿಗೆ ಸಿಕ್ಕಿಬಿದ್ದಿರುತ್ತೀರಿ. ಈ ಮೂಲಕ ನೀವು ಎನ್.ಡಿ.ಪಿ.ಎಸ್. ಕಾಯ್ದೆ 1985 ರ 20(a)(i) ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 16 ನೇ ಮೇ 2025.

( ಎನ್.ವಿ. ಭವಾನಿ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸ್ಪೆಷಲ್ ಕೇಸ್ ನಂ. 33/2023

ಫಿರ್ಯಾದಿಃ ಸರ್ಕಾರ – ಪೆರೇಸಂದ್ರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೆಂಕಟೇಶ ಮತ್ತು ಇನ್ನೊಬ್ಬರು

## ದೋಷಾರೋಪಣೆ

| | | |
|---|---|---|
| ಆರೋಪಿಯ ಹೆಸರು | – | ವೆಂಕಟೇಶ |
| ತಂದೆ ಹೆಸರು | – | ವೆಂಕಟರಾಯಪ್ಪ |
| ವಯಸ್ಸು | – | 50 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸ | – | ಶೆಟ್ಟಿಗೆರೆ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು. |

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ ತಿಳಿಯಿತು

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕ : 16 ನೇ ಮೇ 2025.

LTI of Venkatesh
Attested by me
Advocate for A1
16-5-2025

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸ್ಪೆಷಲ್ ಕೇಸ್ ನಂ. 33/2023

ಫಿರ್ಯಾದಿಃ ಸರ್ಕಾರ – ಪೆರೇಸಂದ್ರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೆಂಕಟೇಶ ಮತ್ತು ಇನ್ನೊಬ್ಬರು

## ದೋಷಾರೋಪಣೆ

| | | |
|---|---|---|
| ಆರೋಪಿಯ ಹೆಸರು | – | ಶ್ರೀನಿವಾಸ |
| ತಂದೆ ಹೆಸರು | – | ಲೇಟ್ ಮುನಿಸ್ವಾಮಿ |
| ವಯಸ್ಸು | – | 45 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸ | – | ಶೆಟ್ಟಿಗೆರೆ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು. |

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ ತಿಳಿಯಿತು

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕ : 16 ನೇ ಮೇ 2025.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

S M ಶ್ರೀನಿವಾಸ